**ಪಾಠ 12** **ಜೂನ್ 16– 22**

# ಬಾಬೇಲ್ ಮತ್ತು ಹರ್ಮಗೆದೋನ್

**ಸಬ್ಬತ್ತಿನ ಮಧ್ಯಾಹ್ನ**

**ಈ ವಾರದ ಅಧ್ಯಯನಕ್ಕಾಗಿ :** ಪ್ರಕಟಣೆ 14:8; 16:19; ಯೆಶಾಯ 52:9; ಪ್ರಕಟನೆ 18:1–10; 16:12–16; 1 ಅರಸುಗಳು 18:1–40; 1 ಕೊರಿಂಥ 15:1,2.

***ಸ್ಮರಣ ವಾಕ್ಯ :*** **ಅವಳ ಹಣೆಯ ಮೇಲೆ ಬಾಬೇಲೆಂಬ ಮಹಾ ನಗರಿ ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ ಎಂದು ಗೂಡಾರ್ಥವುಳ್ಳ ಹೆಸರು ಬರೆದಿತ್ತು. (ಪ್ರಕಟಣೆ 17:5)**

ಪ್ರಕಟಣೆಯು ಪುಸ್ತಕದಲ್ಲಿರುವ  ಮೃಗಗಳು ಮತ್ತು ಭಾಷೆಗಳನ್ನು ಹಳೆಯ ಒಡಂಬಡಿಕೆಯಿಂದ ಪಡೆದುಕೊಂಡಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಉದಾಹರಣೆಗೆ, ಬಾಬೇಲ್ ಎಂಬ ಹೆಸರು ಆರು ಬಾರಿ ಪ್ರಕಟನೆಯಲ್ಲಿ ಕಾಣಿಸುತ್ತದೆ. ಆದರೆ ಇದು ಚರಿತ್ರೆಯ ಪುಟಗಳಿಂದ ಸಾವಿರಾರು ವರ್ಷಗಳ ಹಿಂದೆ ಅಳಿಸಿಹೋದ ಹಳೆಯ ಪುರಾತನ ಬಾಬೇಲಿನ ಕುರಿತಾಗಿ ಮಾತನಾಡುವುದಿಲ್ಲ, ಬದಲಿಗೆ, ಯೋಹಾನನು ಹಳೆಯ ಒಡಂಬಡಿಕೆಯ ಚಿತ್ರಣವನ್ನು ಉಪಯೋಗಿಸಿಕೊಂಡು ಸತ್ಯವನ್ನು ಹೇಳುತ್ತಿದ್ದಾನೆ. ಈ ವಿಷಯದಲ್ಲಿ, ಬಾಬೇಲ್ ಎಂದರೆ ದೊಡ್ಡದಾದ ರಾಜಿಕಿಯ ಮತ್ತು ಧಾರ್ಮಿಕ ಶಕ್ತಿಯಾಗಿ ದೇವರ ಜನರನ್ನು ತುಳಿಯುತ್ತಾ ಇದ್ದ ಶಕ್ತಿಯಾಗಿತ್ತು ಅದೇ ರೀತಿಯಲ್ಲಿ ಈಗಲೂ ಕೂಡ ಅದು ರಾಜಕೀಯ ಮತ್ತು ಧಾರ್ಮಿಕ ಶಕ್ತಿಯಾಗಿ ಕೊನೆಯ ಕಾಲದಲ್ಲಿ ಅದೇ ರೀತಿಯ ಕೆಲಸವನ್ನು ಮಾಡುತ್ತದೆ.

ಅದೇ ರೀತಿಯಲ್ಲಿ ಹರ್ಮಗೆದೋನ್ ಎಂಬ ಪದವು ಕೂಡ, ಈ ಪದವು ಪ್ರಕಟನೆಯ ಪುಸ್ತಕದಲ್ಲಿ ಮಾತ್ರ ಕಾಣ ಸಿಗುತ್ತದೆ ಆದರೆ ಇದರ ಇಬ್ರಿಯ ಭಾಷೆಯ ಅರ್ಥವನ್ನು ನೋಡಿದರೆ ಮೆಗ್ದೋ ಪರ್ವತ ಎಂಬುದಾಗಿ ಅರ್ಥ ನೀಡುತ್ತದೆ, ಇದು ಪುರಾತನ ಇಸ್ರಾಯೇಲಿನ ಒಂದು ಸ್ಥಳವಾಗಿದೆ.

ಹರ್ಮಗೆದೋನ್ ಕುರಿತಾಗಿ ಅನೇಕ ಊಹಾಪೋಹಗಳು ಎದ್ದಿವೆ, ಯಾಕೆಂದರೆ ಮೆಗ್ದೋ ಎಂಬ ಸ್ಥಳದಲ್ಲಿ ಲೋಕದ ಕೊನೆಯ ಕಾಲದಲ್ಲಿ ಒಂದು ಮಹಾ ದೊಡ್ಡ ಸೈನ್ಯದ ಯುದ್ದವಾಗುತ್ತದೆ ಎಂದು ಜನರು ಎದುರುನೋಡುತ್ತಿದ್ದಾರೆ.

ಈ ವಾರ ನಾವು ಬಾಬೇಲ್ ಮತ್ತು ಹರ್ಮಗೆದೋನ್ ಕುರಿತಾಗಿ ಅಧ್ಯಯನ ಮಾಡೋಣ, ಮತ್ತು ಈ ಸೂಚನೆಗಳ ಕುರಿತಾಗಿ ಸತ್ಯವೇದ ಏನು ಹೇಳುತ್ತದೆ ಎಂಬುದನ್ನು ಗಮನಿಸೋಣ.

**ಈ ವಾರದ ಪಾಠವನ್ನು ಜೂನ್ 23 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಆಕೆಯ ಉಗ್ರತೆಯ ದ್ರಾಕ್ಷರಸ

**ಪ್ರಕಟಣೆ 14:8; 16:19; 17:5; 18:2, 10,21, ನ್ನು ಓದಿರಿ. ಪ್ರಕಟನೆಯಲ್ಲಿ ಬಾಬೇಲಿನ ಕುರಿತಾಗಿ ಇರುವ ಆರು ಉಲ್ಲೇಖಗಳು. ಹಳೆಯ ಒಡಂಬಡಿಕೆಯಲ್ಲಿ ಅದು ಕಾಣುವ ಹಾಗೆ ಈ ವಚನಗಳು ಬಾಬೇಲಿನ ಕುರಿತಾಗಿ ಏನು ಹೇಳುತ್ತವೆ ಕೊನಯ ದಿನಗಳ ಹಿನ್ನಲೆಯಲ್ಲಿ ಇದು ಎಷ್ಟು ಪ್ರಾಮುಖ್ಯ?**

________________________________________

________________________________________

ಸತ್ಯವೇದವು ಎರಡು ನಗರಗಳ ಕಥೆಯಾಗಿದೆ ಎಂದು ಹೇಳುತ್ತಾರೆ, ಯೇರುಷಲೆಮು ಮತ್ತು ಬಾಬೇಲ್. ಯೇರುಷಲೆಮು ದೇವರ ಮತ್ತು ಆತನ ಒಡಂಬಡಿಕೆಯ ಮಕ್ಕಳ ನಗರವಾಗಿದೆ (ಕೀರ್ತನೆಗಳು 102:21, ಯೆಶಾಯ 52:9, 65:19, ಪ್ರಕಟಣೆ 3:12), ಬಾಬೇಲ್ ನಗರವು ತುಳಿಯುವ, ಹಿಂಸೆಯ, ತಪ್ಪಾದ ಧಾರ್ಮಿಕತೆ ಮತ್ತು ದೇವರ ವಿರುದ್ದವಾಗಿ ಬಹಿರಂಗವಾಗಿ ಯುದ್ದ ಸಾರುವ ನಗರವಾಗಿದೆ.

ಬಾಬೇಲ್ ಗೋಪುರವನ್ನು ಉದಾಹರಣೆಗೆ ತೆಗೆದುಕೊಳ್ಳಿರಿ (ಆದಿಕಾಂಡ 11:9). ಇಬ್ರಿಯ ಭಾಷೆಯಲ್ಲಿ ಬಾಬೇಲ್ ಎಂಬ ಪದಕ್ಕೆ ಬಾಬೇಲ್ ರಾಜ್ಯದ ಪದವನ್ನೇ ಉಪಯೋಗಿಸಲಾಗಿದೆ. 1 ಪೇತ್ರ 5:13, ರಲ್ಲಿ ಪೇತ್ರನು ಬಾಬೆಲ್ ಸಭೆಯ ಪರವಾಗಿ ಶುಭಾಷಯಗಳನ್ನು ತಿಳಿಸುತ್ತಾನೆ.ಇದರ ಅರ್ಥವೆಂದರೆ ಈಗಿನ ಇರಾಕ್ ನಲ್ಲಿರುವ ಹಳೆಯ ಹಾಳಾದ ಬಾಬೇಲ್ ನಗರದಿಂದ ಇದನ್ನು ಕಳುಹಿಸಿಲ್ಲ ಬದಲಿಗೆ ರೋಮ್ ನಗರದಿಂದ ಇದನ್ನು ಕಳುಹಿಸಿದ್ದಾರೆ ಈ ರೋಮ್ ನಗರವು ಕೂಡ ದೇವರ ವಿರುದ್ಧವಾಗಿ ನಡೆಯುತ್ತದೆ. ಪ್ರಕಟಣೆಯು ಪುಸ್ತಕದಲ್ಲಿ ನೀಡಲಾಗಿರುವ ರೋಮ್ ನ ಪಾತ್ರದ ಕುರಿತಾಗಿ ಹೇಳಲಾಗಿರುವ ಒಂದು ವಿಶೇಷವಾದ ಚಿತ್ರಣವಾಗಿದೆ.

**ಪ್ರಕಟಣೆ 14:8 ಮತ್ತು 18:3 ನ್ನು ಓದಿರಿ. ಈ ವಚನಗಳು ಬಾಬೇಲ್ ದೇವರ ಮಕ್ಕಳ ಮೇಲೆ ಮತ್ತು ಲೋಕದ ಮೇಲೆ ಯಾವ ರೀತಿಯ ದುಷ್ಕೃತ್ಯದ ಪ್ರಭಾವವನ್ನು ಬೀರುತ್ತದೆ ಎಂದು ಹೇಳುತ್ತದೆ?**

________________________________________

________________________________________

ಪ್ರಕಟಣೆಯ ಪುಸ್ತಕದಲ್ಲಿ ಹೇಳಲಾಗಿರುವ ಬಾಬೇಲ್ ಪ್ರಪಂಚದೆಲ್ಲೆಡೆ ಅದರ ಕೆಟ್ಟ ಮತ್ತು ದುಷ್ಟ ಪ್ರಭಾವವನ್ನು ಹೇಗೆ ಸಾರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ತನ್ನ ಅತೀ ಜಾರತ್ವವೆಂಬ ದ್ರಾಕ್ಷರಸ (ಪ್ರಕಟನೆ 14:8) ಎಂಬ ಪದವು ಒಂದು ತಪ್ಪಾದ ಸಿದ್ಧಾಂತಕ್ಕೆ, ತಪ್ಪಾದ ಭೋಧನೆಗೆ ಮತ್ತು ಭ್ರಷ್ಟ ಅಭ್ಯಾಸಗಳಿಗೆ ಮತ್ತು ಅದರಿಂದ ಬರುವ ಪ್ರತಿಫಲಕ್ಕೆ ಸೂಚನೆಯಾಗಿದೆ, ಬಾಬೇಲ್ ದುಷ್ಟತನವನ್ನು ಎಲ್ಲಾ ದೇಶಗಳಿಗೂ ಹರಡುವಂತೆ ಮಾಡುತ್ತದೆ (ಪ್ರಕಟಣೆ 18:3). ಆದ್ದರಿಂದ ಯಾರೂ ಕೂಡ ಹಾಳಾಗದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ.

ಇಂದು ಲೋಕದ ಎಲ್ಲಾ ಕಡೆಗೆ ನೋಡಿರಿ; ಭ್ರಷ್ಟಾಚಾರ, ಗಲಿಬಿಲಿ, ದಬ್ಬಾಳಿಕೆ. ಇದು ನಾವು ದೇವರ ವಾಕ್ಯದಲ್ಲಿ ಮತ್ತು ಕ್ರಿಸ್ತನಲ್ಲಿ ಹೇಗೆ ಭದ್ರವಾಗಿ ಬೇರೂರಬೇಕು ಎಂದು ಹೇಗೆ ತಿಳಿಸುತ್ತದೆ?

**ಸೋಮವಾರ**

## ಬಾಬೇಲ್ ಬಿದ್ದಳು

ಲೋಕದಲ್ಲಿ ಬಾಬೇಲಿನ ಪ್ರಭಾವವು ಎಷ್ಟೇ ಬಲವಾಗಿದ್ದರೂ ಕೂಡ ಪ್ರಕಟಣೆಯ ಪುಸ್ತಕವು ಒಂದು ದಿನ ಅದು ಅಂತ್ಯಗೊಳ್ಳುತ್ತದೆ ಎಂದು ತಿಳಿಸುತ್ತದೆ?

**ಪ್ರಕಟಣೆ 18:1–10 ನ್ನು ಓದಿರಿ ಬಾಬೇಲ್ ಎಂಬ ಮಹಾನಗರಿಯ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?**

ಎರಡನೇಯ ದೂತನ ಸಂದೇಶ (ಪ್ರಕಟಣೆ 14:8) ಬಾಬೇಲ್ ಬಿದ್ದಳು ಎಂಬ ಸಂದೇಶ ಪ್ರಕಟಣೆ 18:2 ರಲ್ಲಿ ಮತ್ತೆ ಉಲ್ಲೆಖಿಸಲಾಗಿದೆ. ಈ ಸಂಸ್ಥೆಯು ಎಷ್ಟು ಹಾಳಾಗಿದೆ ಎಂಬುದಕ್ಕೆ ಇದು ಸಾದೃಶ್ಯವಾಗಿದೆ.

ದೇವರ ಬರೋಣದ ಮುನ್ನ ಸೈತಾನನು ತನ್ನ ಎಲ್ಲಾ ಶಕ್ತಿಯಿಂದ, ಸೂಚನೆಗಳಿಂದ ಮತ್ತು ಸುಳ್ಳು ಅದ್ಭುತಗಳಿಂದ ಹಾಗೂ ಅಪವಿತ್ರವಾದ ಕಾರ್ಯಗಳಿಂದ ಮತ್ತು ದೇವರ ಜನರು ಸತ್ಯವನ್ನು ಅರಿಯದೆ ಅವರು ರಕ್ಷಣೆ ಹೊಂದದೆ ಇರುವುದಕ್ಕೆ ಮತ್ತು ದುರ್ನಿತಿಯ ಎಲ್ಲಾ ವಂಚನೆಯಿಂದಲೂ ಕೂಡ ನಾಶವಾಗುವುದಕ್ಕೆ 2 ಥೆಸಲೋನಿಕ 2:9–11 ಬಹಳವಾಗಿ ಪ್ರಯತ್ನ ಪಡುತ್ತಾನೆ ಎಂದು ಸತ್ಯವೇದ ಸ್ಪಷ್ಟ ಪಡಿಸುತ್ತದೆ. ಲೋಕದಲ್ಲಿ ಸಭೆಯ ಮತ್ತು ಲೋಕದ ಐಕ್ಯತೆಯು ತನ್ನ ಅಂತಿಮ ಹಂತವನ್ನು ತಲುಪುತ್ತದೆ. ಈ ಹಂತವನ್ನು ತಲುಪುವ ಮುನ್ನ ಕ್ರೈಸ್ತಿಯು ಲೋಕದಲ್ಲಿ ಬಾಬೇಲಿನ ಬೀಳುವಿಕೆ ಸಂಪೂರ್ಣವಾಗುತ್ತದೆ ಈ ಬದಲಾವಣೆಯು ಪ್ರಗತಿಪರವಾಗಿರುತ್ತದೆ, ಮತ್ತು ಇದು ಪ್ರಕಟಣೆ 14:8 ರಲ್ಲಿ ಹೇಳಲಾಗಿರುವ ಪರಿಪೂರ್ಣ ನೆರವೇರಿಕೆಯು ಇನ್ನೂ ಭವಿಷ್ಯದಲ್ಲಿ ನಡೆಯುತ್ತದೆ. **ಎಲೆನ್ ಜಿ ವೈಟ್, ಮಹಾ ಹೋರಾಟ ಪುಟ 389, 390.**

ಈ ಪರಿಪೂರ್ಣ ನೆರವೇರಿಕೆಯು ಈಗ ಹತ್ತಿರವಾಗಿದೆಯೋ ಇಲ್ಲವೋ ದೇವರಿಗೆ ಮಾತ್ರ ಗೊತ್ತು.ಆದರೆ ನಮಗೆ ಗೊತ್ತಿರುವ ಪ್ರಕಾರ ಈ ವಚನಗಳ ಪ್ರಕಾರ ತನ್ನ ಮಹಾ ದುಷ್ಟತನಕ್ಕಾಗಿ ಆತ್ಮಿಯ ಬಾಬೇಲ್ ಒಂದು ದಿನ ಶಿಕ್ಷೆಯನ್ನು ಅನುಭವಿಸುತ್ತದೆ. ಅವಳ ಪಾಪಗಳು ಒಂದರ ಮೇಲೊಂದು ಸೇರಿ ಆಕಾಶದ ಪರ್ಯಂತರಕ್ಕೂ ಬೆಳೆದವೇ. ದೇವರು ಅವಳ ಅನ್ಯಾಯಗಳನ್ನು ಜ್ಞಾಪಿಸಿಕೊಂಡನು. (ಪ್ರಕಟಣೆ 18:5). ಈ ಅಭಿವ್ಯಕ್ತಿಕರಣವು ಹಳೆಯ ಒಡಂಬಡಿಕೆಯಲ್ಲಿ ಪುರಾತನ ಬಾಬೇಲಿನ ಕುರಿತಾಗಿ ಹೇಳಲಾಗಿರುವ ಭಾಷೆಯನ್ನು ತೋರಿಸುತ್ತದೆ (ಯೇರೆಮಿಯ 51:9), ಮತ್ತು ಅದರ ಮೇಲೆ ನ್ಯಾಯ ತೀರ್ಪಿನ ಘಳಿಗೆ ಬಂದಿದೆ ಎಂದು ಹೇಳುತ್ತದೆ.

ಬರಲಿರುವ ಈ ನ್ಯಾಯತೀರ್ಪು ನಮಗೆ ಅಚ್ಚರಿಯನ್ನು ಮೂಡಿಸಬಾರದು. ಯಾಕೆಂದರೆ ಪುರಾತನ ಬಾಬೇಲ್ ನ್ಯಾಯ ತೀರ್ಪನ್ನು ಎದುರಿಸಿದೆ (ದಾನಿಯೇಲ 5) ಸತ್ಯವೇದವು ಅನೇಕ ಭಾಗಗಳಲ್ಲಿ ನಾವು ನಡೆಸಿದ ಕೃತ್ಯಗಳಿಗೆ ಇದರಲ್ಲಿ ಬಾಬೇಲ್ ಕೂಡ ಸೇರಿಕೊಂಡು ನ್ಯಾಯ ವಿಚಾರಣೆಯನ್ನು ಎದುರಿಸಬೇಕಾಗಿದೆ ಎಂಬುದಾಗಿ ತಿಳಿಸುತ್ತದೆ. ಕ್ರೈಸ್ತರಾಗಿ ನಾವು ನ್ಯಾಯ ವಿಚಾರಣೆಯಲ್ಲಿ ನಮಗೆ ಒಬ್ಬ ಮದ್ಯಸ್ತಿಕನು ಇದ್ದಾನೆ ಮತ್ತು ಆತನು ನಮ್ಮ ಪರವಾಗಿ ನಿಲ್ಲುತ್ತಾನೆ (1 ಯೋಹಾನ 2:1 ,ದಾನಿಯೇಲ 7:22) ಎಂದು ತಿಳಿಯುವುದು ಎಷ್ಟು ಸಮಾಧಾನದ ವಿಷಯವಾಗಿದೆ. ಇಲ್ಲದೆ ಹೋದರೆ ನಾವು ಕೂಡ ಬಾಬೇಲಿನ ರೀತಿಯಲ್ಲಿ ನಾಶನಕ್ಕೆ ಗುರಿಯಾಗುತ್ತೇವೆ.

**ಈಗಿನ ಕಾಲದಲ್ಲಿ ನಡೆಯುತ್ತಿರುವ ಅನ್ಯಾಯ ಮತ್ತು ಅಕ್ರಮಗಳು ದೇವರಿಂದ ಒಂದು ದಿನದಲ್ಲಿ ಸಂಪೂರ್ಣವಾದ ತೀರ್ಪನ್ನು ಹೊಂದುತ್ತವೆ ಎಂಬ ವಾಗ್ದಾನವನ್ನು ತಿಳಿದು ನಾವು ಹೇಗೆ ಸಮಾಧಾನವನ್ನು ಪಡೆಯಬಹುದು?**

**ಮಂಗಳವಾರ**

## ಹರ್ಮಗೆದೊನ್

ಅನೇಕ ಜನರಿಗೆ ಕ್ರೈಸ್ತವರನ್ನು ಸೇರಿಸಿಕೊಂಡು ಪ್ರಕಟಣೆಯ ಪುಸ್ತಕದ ಕುರಿತಾಗಿ ಅಷ್ಟಾಗಿ ತಿಳಿದುಕೊಂಡಿಲ್ಲ, ಒಂದು ವಿಗ್ರಹ ಮತ್ತು ಒಂದು ಮಾತು ಬಹಳ

ಪ್ರಸಿದ್ದವಾಗಿದೆ ಅದುವೇ ಹರ್ಮಗೆದೊನ್ (ಪ್ರಕಟನೆ 16:16). ಹೊರಗಿನ ಪ್ರಪಂಚದಲ್ಲಿಯೂ ಕೂಡ ಜನರ ಭವಿಷ್ಯವನ್ನು ತೀರ್ಮಾನಿಸುವ ಒಂದು ಮುಖ್ಯವಾದ ಕಾಲ ಘಟ್ಟವಾಗಿ ಇದು ಕಾಣುತ್ತದೆ. ಹಾಲಿವುಡ್ ನಲ್ಲಿ ಹರ್ಮಗೆದೊನ್ ಎಂಬ ಸಿನಿಮಾವನ್ನು ನಿರ್ಮಾಣ ಮಾಡಿದರು ಅದರಲ್ಲಿ ಒಂದು ದೊಡ್ಡ ಆಕಾಶದ ಶಕ್ತಿಯು ಮೇಲಿನಿಂದ ಬಂದು ಭೂಮಿಯನ್ನು ನಾಶಮಾಡುತ್ತದೆ. ಒಂದು ವಿಧದಲ್ಲಿ ಜನರ ಮನಸ್ಸಿನಲ್ಲಿ ಲೋಕದ ಅಂತ್ಯದ ಚಿತ್ರಣ ಇದುವೇ ಆಗಿದೆ.

ಅನೇಕ ಕ್ರೈಸ್ತವರು ಪ್ರಕಟಣೆಯ ಪುಸ್ತಕದ ಜೊತೆಗೆ ಪರಿಚಯವಿರುವವರು ಮದ್ಯ ಪ್ರಾಚ್ಯದಲ್ಲಿರುವ ಒಂದು ಸ್ಥಳವಾದ ಹರ್ಮಗೆದೊನ್ ನಲ್ಲಿ ಲೋಕದ ಕೊನೆಯ ಯುದ್ದವು ನಿಜವಾಗಿ ನಡೆಯುತ್ತದೆ ಇದರಿಂದ ಲೋಕದ ಅಂತ್ಯವಾಗುತ್ತದೆ ಎಂದು ಭಾವಿಸಿದ್ದಾರೆ. ಇನ್ನೊಂದು ಅರ್ಥದಲ್ಲಿ ನೋಡುವುದಾದರೆ 200 ಮಿಲಿಯನ್ ಜನರ ಒಂದು ಸೇನೆಯು ಏಷ್ಯಾ ಭಾಗದಿಂದ ಉತ್ತರ ಇಸ್ರೇಲ್ ವರೆಗೂ ಕೂಡ ಎಲ್ಲವನ್ನೂ ಸಂಪೂರ್ಣವಾಗಿ ನಾಶ ಮಾಡುತ್ತದೆ. ಮತ್ತೆ ಕೆಲವರು ಲೋಕದಲ್ಲಿ ಅನೇಕ ರೀತಿಯ ಸೈನ್ಯಗಳು ಒಂದುಗೂಡಿ ಅವರ ಅರ್ಥದಲ್ಲಿ ಲೋಕದ ಕೊನೆಯ ಯುದ್ದಕ್ಕೆ ಸಿದ್ದತೆಯನ್ನು ಮಾಡಿಕೊಳ್ಳುತ್ತಾರೆ ಅವರೆಲ್ಲರೂ ಕೂಡ ಮೆಗಿದ್ದೋ ಪ್ರದೇಶದ ಹರ್ಮಗೆದೊನ್ ನಲ್ಲಿ ಸೇರುತ್ತಾರೆ.

ಆದರೆ, ಈ ಯುದ್ದವು ಭಿನ್ನವಾದ ಚಿತ್ರಣವನ್ನು ನೀಡುತ್ತದೆ. ಸತ್ಯವೇದವು ಹರ್ಮಗೆದೊನ್ ಯುದ್ದವನ್ನು ಕೊನೆಯ ಅಂತ್ಯದ ಚಿತ್ರಣವಾಗಿ ತೋರಿಸುತ್ತದೆ. ಇದು ವಿಭಿನ್ನ ದೇಶಗಳ ನಡುವೆ ಮಹಾ ಹೋರಾಟದ ಅಂತಿಮ ಹಂತದಲ್ಲಿ ನಡೆಯುತ್ತದೆ. ಇದೊಂದು ಧಾರ್ಮಿಕ ಯುದ್ದ, ಇದು ಆರ್ಥಿಕ ಅಥವಾ ರಾಜಕೀಯ ಯುದ್ದವಲ್ಲ, ಆದರೆ ಅರ್ಥಿಕ ಮತ್ತು ರಾಜಕೀಯ ವಿಷಯಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ.

**ಪ್ರಕಟನೆ 16:12–16 ನ್ನು ಓದಿರಿ. ಈ ವಚನಗಳ ಆಧಾರದ ಮೇಲೆ ಹರ್ಮಗೆದೋನ್ ನ ಕುರಿತಾಗಿ ಏನು ಹೇಳುತ್ತದೆ?**

ಮೊದಲು, ಇಲ್ಲಿಯ ಭಾಷೆ ಹೇಗೆ ಸೂಚನೆಗಳಿಂದ ತುಂಬಿದೆ. ಕಪ್ಪೆಗಳಂತೆ ಇರುವ ಆತ್ಮಗಳು ಘಟಸರ್ಪನ ಬಾಯಿಂದ ಹೊರಬರುವುದನ್ನು ನೋಡುತ್ತೇವೆ (ಪ್ರಕಟನೆ 13, ರಲ್ಲಿ ಇರುವ ಅಧಿಕಾರಗಳ ಕುರಿತಾಗಿ ಮತ್ತು ಪ್ರಕಟಣೆ 13:11 ರಲ್ಲಿ ಹೇಳಲಾಗಿರುವ ಸುಳ್ಳು ಪ್ರವಾದಿಯ ಕುರಿತಾಗಿ ಹೇಳಲಾಗಿರುವ ಮಾತುಗಳು ಭೂಮಿಯ ಮೇಲಿನ ಮೃಗದ ಕುರಿತಾಗಿ ಹೇಳುತ್ತವೆ). ಮಹಾ ಹೋರಾಟವು ಇಲ್ಲಿಯೂ ಸಹ  ಕಾಣುತ್ತದೆ, ದೆವ್ವಗಳ ಆತ್ಮಗಳು (ಪ್ರಕಟಣೆ 16:14)ದೇವರ ಮಹಾ ದಿನದಲ್ಲಿ ಯುದ್ದಕ್ಕೆ ಹೊರಡುತ್ತವೆ. (ಪ್ರಕಟನೆ 16:14), ಹರ್ಮಗೆದೋನ್ ಯಾವುದೇ ರೀತಿಯಲ್ಲಿ ಕಾಣಿಸಿದರೂ ಕೂಡ ಇದು ಲೋಕದ ಎಲ್ಲಾ ಕಡೆಗಳಲ್ಲಿ ಕ್ರಿಸ್ತನ ಮತ್ತು ಸೈತಾನನ ಹಿಂಬಾಲಕರ ನಡುವಿನ ಹೋರಾಟವಾಗಿದೆ. ಇದು ಮೆಗಿದ್ದೋ ಪ್ರಾಂತ್ಯದಲ್ಲಿ ನಡೆಯುವ  ಸ್ಥಳೀಯ ಯುದ್ದವಲ್ಲ, ಬದಲಿಗೆ ಪ್ರಕಟನೆಯಲ್ಲಿ ತಿಳಿಸಿರುವ ಹಾಗೆ ಅಧುನಿಕ ಇರಾಕ್ ನ ಬಾಬೇಲ್ ದೇಶದ ಒಂದು ಮೂಲೆಯಲ್ಲಿ ನಡೆಯುವ ಯುದ್ದವಲ್ಲ.

**ಪ್ರಕಟಣೆ 16:15 ನ್ನು ಓದಿರಿ. ಈ ಘಟನೆಗಳ ನಡುವೆ ಎಷ್ಟೊಂದು ಅದ್ಭುತವಾದ ಚಿತ್ರಣವನ್ನು ನಾವು ನೋಡುತ್ತೇವೆ. ಯೇಸುವು ತನ್ನ ಸುವಾರ್ತೆಯ ಮೂಲಕ ನಮ್ಮನ್ನು ಪ್ರೋತ್ಸಾಹಿಸುತ್ತಾನೆ. ಇದರಲ್ಲಿ ಆತನ ಬರೋಣದ ಭರವಸೆ ಮತ್ತು ನಾವು ಆತನ ನೀತಿಯಿಂದ ತುಂಬಿಸಲ್ಪಡುವ ಅವಶ್ಯಕತೆಯನ್ನು ತೋರಿಸುತ್ತದೆ. ನಾವು ಭಾಗಿಯಾಗಿರುವ ಆತ್ಮೀಯ ಯುದ್ಧದಲ್ಲಿ ನಾವು ಯಾವ ರೀತಿಯ ಪಾತ್ರವನ್ನು ವಹಿಸಬೇಕಾಗಿದೆ ಎಂಬುದರ ಕುರಿತಾಗಿ ಇದು ಏನು ಹೇಳುತ್ತದೆ?**

**ಬುಧವಾರ**

## ಹರ್ಮಗೆದೊನ್ ಮತ್ತು ಕರ್ಮೆಲ್ ಬೆಟ್ಟ : ಭಾಗ 1

ಹಾಗಾದರೆ, ಹರ್ಮಗೆದೊನ್ ಎಂಬುದು ಮಹಾ ದೊಡ್ಡ ಯುದ್ದವೇನು? ಮೊದಲು, ಹೆಸರು ಸೂಚಿಸುವ ಹಾಗೆ ಮೆಗಿದ್ದೋ ಪರ್ವತ ಎಂದು ತೋರುತ್ತದೆ. ಆದರೆ, ಮೆಗಿದ್ದೋ ಪ್ರಾಂತ್ಯದಲ್ಲಿ ಯಾವುದೇ ಪರ್ವತಗಳು ಇಲ್ಲ, ಆದರೆ ಈ ಪ್ರಾಂತ್ಯದಲ್ಲಿ ಕರ್ಮೆಲ್ ಬೆಟ್ಟವು ಕಾಣುತ್ತದೆ ಮತ್ತು ಸತ್ಯವೇದದ ಅಧ್ಯಯನಗಾರರು ಮೆಗಿದ್ದೋ ಪರ್ವತವನ್ನು ಕರ್ಮೆಲ್ ಪರ್ವತಕ್ಕೆ ಹೋಲಿಸುತ್ತಾರೆ.

ಇದಕ್ಕೆ ಇನ್ನೂ ಹೆಚ್ಚಿನ ವಿಷಯವನ್ನು ಸೇರಿಸಿಕೊಂಡರೆ ಸತ್ಯವೇದ ವಿಧ್ಯಾರ್ಥಿಗಳು ಕರ್ಮೆಲ್ ಬೆಟ್ಟದ ಮೇಲೆ ಎಲಿಯನ ಮತ್ತು ಬಾಳನ ಸುಳ್ಳು ಪ್ರವಾದಿಗಳ ನಡುವಿನ ಹೋರಾಟವನ್ನು ಒಂದು ಸೂಚನೆಯಾಗಿ ನೋಡುತ್ತಾರೆ. ಪ್ರಕಟಣೆ 13 ರಲ್ಲಿ ನೆರವೇರುವ ಒಂದು ಮುನ್ನುಡಿಯಾಗಿದೆ.

ನಿನ್ನೆಯ ದಿನದಲ್ಲಿ ನಾವು ನೋಡಿದ ಹಾಗೆ, ಪ್ರಕಟಣೆ 16:13ರಲ್ಲಿ ಘಟಸರ್ಪನು, ಮೃಗ, ಮತ್ತು ಸುಳ್ಳು ಪ್ರವಾದಿಯು ಕುರಿತಾಗಿ ಹೇಳುತ್ತಾ ಪ್ರಕಟಣೆ 13 ರಲ್ಲಿ ನಡೆಯುವ ಘಟನೆಗಳನ್ನು ತೋರಿಸುತ್ತದೆ, ಒಂಬತ್ತನೆಯ ವಾರದಲ್ಲಿ ನಾವು ನೋಡಿದ ಹಾಗೆ ನಕಲಿ ತ್ರೈಯೇಕತ್ವದ ಕುರಿತಾಗಿ ನೋಡಿದ್ದೇವೆ.

ಪ್ರಕಟನೆ 13 ಅಧ್ಯಾಯವು 13 ಮತ್ತು 14 ವಚನದ ಕೊನೆಯ ಭಾಗಕ್ಕೆ ತೆಗೆದುಕೊಂಡು ಹೋಗುತ್ತದೆ. ಎರಡನೇಯ ಮೃಗವು ಮಹತ್ವವಾದ ಸೂಚಕಕಾರ್ಯಗಳನ್ನು ನಡೆಸುತ್ತದೆ, ಮನುಷ್ಯರ ಎದುರುಗಡೆಯಲ್ಲಿ ಆಕಾಶದಿಂದ ಬೆಂಕಿಯನ್ನು ಸಹ ತರುತ್ತದೆ (ಪ್ರಕಟಣೆ 13 :13). ಈ ಘಟನೆಗಳು ಕ್ರಿಸ್ತನಿಗೂ ಮತ್ತು ಸೈತಾನನ ನಡುವೆ ಹೋರಾಟಕ್ಕೆ ನಡೆಸುತ್ತದೆ, ಮತ್ತು ಇದರಲ್ಲಿ ನಿಜವಾದ ದೇವರನ್ನು ಆರಾಧಿಸುವ ಮತ್ತು ಸುಳ್ಳು ದೇವರನ್ನು ಮೃಗದ ವಿಗ್ರಹವನ್ನು ಆರಾಧಿಸುವ ಸುಳ್ಳಿನ ಆರಾಧನೆಯ ನಡುವಿನ ಹೋರಾಟವಾಗಿದೆ. (ಪ್ರಕಟಣೆ 13:14).

**1 ಆರಸುಗಳು 18:1–18 ನ್ನು ಓದಿರಿ. ಪ್ರಕಟಣೆ ಪುಸ್ತಕದಲ್ಲಿ ಹೇಳಿರುವ ಹಾಗೆ ಕೊನೆಯ ಕಾಲದಲ್ಲಿ ನಡೆಯುವ ಕೆಲವು ಘಟನೆಗಳ ಕುರಿತಾಗಿ ಇದು ಏನು ಹೇಳುತ್ತದೆ.**

ಅನೇಕ ವಿಧದಲ್ಲಿ ಮಹಾ ಹೋರಾಟದ ಸುಂದರ ಚಿತ್ರಣವನ್ನು ತೋರಿಸುತ್ತದೆ.ಎಲಿಯನು 18 ನೇಯ ವಚನದಲ್ಲಿ ಇದನ್ನು ಬಹಳ ಸ್ಪಷ್ಟವಾಗಿ ತಿಳಿಸುತ್ತಾನೆ. ಜನರು ದೇವರ ಆಜ್ಞೆಯನ್ನು ತಿರಸ್ಕರಿಸಿದ್ದಾರೆ ಮತ್ತು ಸುಳ್ಳು ದೇವರುಗಳನ್ನು ಹಿಂಬಾಲಿಸುತ್ತಿದ್ದಾರೆ. ಯಾವಾಗಲೂ ಇದುವೇ ವಿಷಯವಾಗುತ್ತದೆ ಅನೇಕ ವಿಧದಲ್ಲಿ ಚರಿತ್ರೆಯ ಉದ್ದಕ್ಕೂ ಕೂಡ ದುಷ್ಟತನವು ತನ್ನ ಶಕ್ತಿಯನ್ನು ಪ್ರದರ್ಶಿಸುತ್ತಿದೆಯಲ್ಲವೇ? ನಾವು ಆಕಾಶವನ್ನು ಭೂಮಿಯನ್ನು ಅದರಲ್ಲಿರುವ ಸಮಸ್ತವನ್ನು ಸೃಷ್ಟಿಸಿದಾತನನ್ನು ಆರಾಧಿಸುತ್ತಿದ್ದೇವೆ (ಪ್ರಕಟಣೆ 14:7) ಅಥವಾ ಬೇರೆ ಯಾರನ್ನೋ ಮತ್ತು ಬೇರೆ ಯಾವುದನ್ನೋ ಆರಾಧಿಸುತ್ತಿದ್ದೇವೆ. ಪ್ರಕಟಣೆ 13 ರ ದೃಷ್ಟಿಕೋನದಲ್ಲಿ ಮತ್ತು ಅದರ ಘಟನೆಗಳ ಹಿನ್ನಲೆಯಲ್ಲಿ ದೇವರನ್ನು ಆರಾಧಿಸುವ ಬದಲಿಗೆ ಜನರು ಮುದ್ರೆಯನ್ನು ಮತ್ತು ವಿಗ್ರಹವನ್ನು ಆರಾಧಿಸುತ್ತಿದ್ದಾರೆ. ಇದರಲ್ಲಿ ಯಾವುದೇ ರೀತಿಯ ಮಧ್ಯ ಭಾಗವಿಲ್ಲ. ನಾವು ದೇವರ ಕಡೆಗೆ ಇದ್ದೇವೆ ಅಥವಾ ಸೈತಾನನ ಕಡೆಗೆ ಇದ್ದೇವೆ. ಆದ್ದರಿಂದಲೇ ಇಲ್ಲಿರುವ ವಿಷಯಗಳು ಬಹಳ ಮುಖ್ಯ ಅದರಲ್ಲೂ ವಿಶೇಷವಾಗಿ ಹರ್ಮಗೆದೋನ್ ಯುದ್ಧದಲ್ಲಿ ಮತ್ತು ಕರ್ಮೆಲ್ ಬೆಟ್ಟದಲ್ಲಿ ವ್ಯತ್ಯಾಸವು ಬಹಳ ಸ್ಪಷ್ಟವಾಗಿ ಕಾಣುತ್ತದೆ.

**ಗುರುವಾರ**

## ಹರ್ಮಗೆದೋನ್ ಮತ್ತು ಕರ್ಮೆಲ್ ಬೆಟ್ಟ: ಭಾಗ 2

**1 ಆರಸುಗಳು 18:18–40 ರ ವರೆಗೆ ಓದಿರಿ. ಇಲ್ಲಿ ಏನು ನಡೆಯುತ್ತಿದೆ? ಕಥೆಯು ಹೇಗೆ ಅಂತ್ಯವಾಗುತ್ತದೆ ಮತ್ತು (ಸಮಾನಾಂತರಗಳನ್ನು ಬಹಳ ದೂರಕ್ಕೆ**

**ತೆಗೆದುಕೊಂಡು ಹೋಗದೆ)ಏನು ನಡೆಯುತ್ತದೆ ಎಂಬುದರ ಕುರಿತಾಗಿ ಈ ಕಥೆಯು ಏನು ಹೇಳುತ್ತದೆ–ಮಹಾ ಹೋರಾಟದ ಕೊನೆಯ ಹಂತದ ಮುಕ್ತಾಯವನ್ನು ಇದು ಹೇಗೆ ಪ್ರಕಟಿಸುತ್ತದೆ?**

ಕರ್ಮೆಲ್ ಬೆಟ್ಟದ ಮೇಲಿನ ಯುದ್ದವು ಪ್ರವಾದಿಯಾದ ಎಲಿಯನ ಮತ್ತು ಬಾಳನ 450 ಪ್ರವಾದಿಗಳ ನಡುವೆ ನಡೆಯಿತು. (ಇಲ್ಲಿ ಕೆಟ್ಟತನವು ಹೇಗೆ ಒಳ್ಳೆಯದಕ್ಕಿಂತ ಸಂಖ್ಯೆಯಲ್ಲಿ ಹೆಚ್ಚಾಗಿತ್ತು ಎಂದು ಗಮನಿಸಿರಿ). ಭೂಲೋಕವನ್ನು ಮತ್ತು ಪರಲೋಕವನ್ನು ಸೃಷ್ಟಿಸಿದ ನಿಜವಾದ ದೇವರೋ ಅಥವಾ ಬಾಳನು ದೇವರೋ ಎಂಬುದರ ಪರೀಕ್ಷೆಯಾಗಿತ್ತು, ಘಟಸರ್ಪನ ಮತ್ತೊಂದು ಚಿತ್ರನವಾಗಿತ್ತು ಮತ್ತು ಲೋಕವನ್ನು ಮೋಸಗೊಳಿಸುವ ಸೈತಾನನ ಮತ್ತೊಂದು ವಿಧಾನವಾಗಿದೆ (ಪ್ರಕಟಣೆ 12:9).

ಬಾಳನ ಪ್ರವಾದಿಗಳು ಅವರನ್ನು ದೇವರನ್ನು ಪ್ರಾರ್ಥಿಸಿ ಅವರು ಯಜ್ಞವಾಗಿ ಆರ್ಪಿಸಿದ ಕೋಣವನ್ನು ಬೆಂಕಿಯ ಮೂಲಕ ಸ್ವೀಕರಿಸಬೇಕು ಎಂದು ಬೇಡಿದರು. ಅವರು ಬೆಳಗಿನಿಂದ ಮಧ್ಯಾನ್ಹದವರೆಗೂ ಕೂಗಿದರು. ಗಟ್ಟಿಯಾಗಿ ಕೂಗಿರಿಎಂದು ಎಲಿಯನು ಅವರನ್ನು ಹಿಯಾಳಿಸಿದನು ಒಂದು ವೇಳೆ ಆತನು ನಿದ್ರೆ ಮಾಡುತ್ತಿರಬಹುದು (1 ಅರಸುಗಳು 18:27).ಪೂಜಾರಿಗಳು ಅವರ ಸ್ವಂತ ಕ್ರಿಯೆಗಳ ಮೇಲೆ ಅಧಾರವಾಗಿದ್ದರು. ಅವರನ್ನು ಅವರು ಹೊಡೆದುಕೊಂಡರು ಕತ್ತಿಯಿಂದ ಇರಿದುಕೊಂಡರು ರಕ್ತವು ಧಾರಾಕಾರವಾಗಿ ಹರಿಯಿತು. ಸಾಯಂಕಾಲದ ನೈವೇದ್ಯದ ಸಮಯಕ್ಕೆ ಅವರು ಸೋತು ಹೋದರು.

ಎಲಿಯನ ಬಲಿಯನ್ನು ಮೂರು ಬಾರಿ ನೀರಿನಲ್ಲಿ ನೆನಸಲಾಯಿತು, ಮತ್ತು ನೀರು ಅಂಚುಗಳ ತನಕ ಬಂದು ನಿಂತಿತ್ತು. ಎಲಿಯನು ಬಹಳ ಸರಳವಾದ ರೀತಿಯಲ್ಲಿ ದೇವರನ್ನು ಪ್ರಾರ್ಥಿಸಿದನು. ದೇವರು ಬಹು ಬೇಗನೆ ಅಲ್ಲಿರುವ ಎಲ್ಲವನ್ನೂ ಅಂದರೆ ಕಲ್ಲುಗಳು ಯಜ್ಞವೇದಿ ಮತ್ತು ಮಣ್ಣನ್ನು ಕೂಡ ಸುಟ್ಟು ಹಾಕಿದನು. ನಿಜವಾದ ದೇವರ ಶಕ್ತಿಯು ಬಾಳನ ಶಕ್ತಿಗಿಂತ ಪ್ರಬಲವಾಗಿತ್ತು.

ಪ್ರಕಟಣೆ 16:13; 19:20,21 ನ್ನು ಓದಿರಿ. ಮತ್ತು ಬಾಳನ ಪ್ರವಾದಿಗಳ ಹಣೆಬರಹದ ಜೊತೆಗೆ ಹೋಲಿಸಿರಿ. ಇಲ್ಲಿ ನೀವು ಏನು ನೋಡುತ್ತಿರಿ?

ಇಲ್ಲಿಯವರೆಗೆಹರ್ಮಗೆದೊನ್ ನ ಕುರಿತಾಗಿ ಏನೇನು ವಿಷಯಗಳು ತಿಳಿದಿಲ್ಲವೋ ಅದನ್ನು ಬಿಟ್ಟರೆ ಅದರ ಫಲಿತಾಂಶವು ನಮಗೆ ಗೊತ್ತಾಗಿದೆ; ದೇವರ ಶತ್ರುಗಳ ಸಂಹಾರ ಮತ್ತು ದೇವರ ಮತ್ತು ಆತನ ಪರಿಶುದ್ದರ ಸಮರ್ಥನೆಯನ್ನು ನಾವು ನೋಡುತ್ತೇವೆ.

**1 ಕೊರಿಂಥ 15:1,2ನ್ನು ಓದಿರಿ. ಇದು ಹರ್ಮಗೆದೊನ್ ನ ಚಿತ್ರಣಕ್ಕೆ ಭಿನ್ನವಾಗಿದ್ದರೂ ಕೂಡ ಪೌಲನು ಹೇಳುತ್ತಿರುವ ವಿಷಯವೇನು ಮತ್ತು ಭವಿಷ್ಯದ ವಿಷಯುದಲ್ಲಿ ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಯಾಕೆ ಅಷ್ಟು ಪ್ರಾಮುಖ್ಯವಾಗುತ್ತದೆ?ಪ್ರಕಟಣೆ 16:15 ನ್ನು ಕೂಡ ಓದಿರಿ. ಹರ್ಮಗೆದೊನ್ ನ ಹಿನ್ನಲೆಯಲ್ಲಿ ಈ ವಚನಗಳು ಏನು ಹೇಳುತ್ತವೆ?**

**ಶುಕ್ರವಾರ**

**ಮುಂದಿನ ಆಲೋಚನೆಗಾಗಿ :** ಹರ್ಮಗೆದೊನ್ ವಿಚಾರವಾಗಿ ಎಲ್ಲೆಲ್ಲಿ ತಿಳಿಸಲಾಗಿದೆಯೋ ಅಲ್ಲಿ ತೆರೆಯ ಹಿಂದೆ ದುಷ್ಟ ಕಾರ್ಯಗಳು ನಡೆದರೂ ಕೂಡ ವ್ಯಯಕ್ತಿಕವಾದ ಸತ್ಯಗಳು ಬಹಿರಂಗವಾಗುತ್ತವೆ. ನಾವು ನೋಡಿದ ಹಾಗೆ ಪ್ರಕಟಣೆ 16:15 ರಲ್ಲಿ ಇಗೋ ಕಳ್ಳನು ಬರುವಂತೆ ಬರುತ್ತೇನೆ; ತಾನು ನಿರ್ವಾಣನಾಗಿ ತಿರುಗಾಡಿ ಅವಮಾನಕ್ಕೆ ಗುರಿಯಾದೆನೆಂದು ಎಚ್ಚರವಾಗಿದ್ದು ತನ್ನ ವಸ್ತ್ರಗಳನ್ನು ಕಾಪಾಡಿಕೊಳ್ಳುವವನು ಧನ್ಯನು. ಎಂದು ತಿಳಿಸಿದೆ. ಈ ವಚನವು ಹರ್ಮಗೆದೊನ್ ವಿಚಾರವಾಗಿ ಹೇಳಿರುವ ವಚನಗಳ ನಡುವೆ

ಕಾಣಿಸಿಕೊಳ್ಳುತ್ತದೆ, ಇದರಲ್ಲಿ ಹೊಸ ಒಡಂಬಡಿಕೆಯಲ್ಲಿ ಹೇಳಲಾಗಿರುವ ಕೊನೆಯ ಕಾಲದಲ್ಲಿ ವ್ಯಯಕ್ತಿಕ ಸಿದ್ದತೆಯ ಮಹತ್ವವನ್ನು ಹೇಳುತ್ತದೆ.

ಇಂತಹ ಮತ್ತೊಂದು ವಚನವೆಂದರೆ ಪ್ರಕಟಣೆ 17:14 ಅವರು ಯಜ್ಞದ ಕುರಿಯಾದಾತನ ಮೇಲೆ ಯುದ್ದ ಮಾಡುವರು ಆದರೆ ಆತನು ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವುದರಿಂದ ಅವರನ್ನು ಜಯಿಸುವನು ಮತ್ತು ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ ಆಗಿರುವ ಆತನ ಕಡೆಯವರು ಆ ಜಯದಲ್ಲಿ ಪಾಳುಗಾರರಾಗುವರು. ಈ ವಚನದಲ್ಲಿ ನಾವು ನೋಡುವ ಹಾಗೆ ನಂಬಿಕೆಯ ಜನರು ತಮ್ಮ ಶತ್ರುಗಳನ್ನು ಆಯುಧಗಳಿಂದ ನಾಶಪಡಿಸುವುದಿಲ್ಲ ಬದಲಿಗೆ ಅವರು ಅವರ ದೇವರಿಗೆ ನಂಬಿಕೆಯಾಗಿರುತ್ತಾರೆ. ಈ ದಿನಗಳಲ್ಲಿ ದೇಶಗಳು ಮಾಡುವ ಯುದ್ದಕ್ಕೆ ಇದು ಭಿನ್ನವಾಗಿರುವ ಯುದ್ದವಾಗಿದೆ. ನಾವು ಈ ಹಿಂದೆ ಹೇಳಿದ ಹಾಗೆ ಇದು ಹೃದಯವನ್ನು ಗೆಲ್ಲುವುದಕ್ಕಾಗಿ ನಡೆಯುವ ಯುದ್ದವಾಗಿದೆ. ಇದು ಯಜ್ಞಕ್ಕಾಗಿ ಅರ್ಪಿತವಾದ ಕುರಿಮರಿಗೆ ನಾವು ತೋರಿಸುವ ನಿಷ್ಠೆಯಾಗಿದೆ. **ಜಾನ್ ಪಾಲಿನ್ ಅರ್ಮಗೆದೊನ್ ಅಟ್ ದಿ ಡೋರ್ ಪುಟ 193**.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪ್ರಕಟನೆಯಲ್ಲಿ ಹೇಳಲಾಗಿರುವ ಅನೇಕ ಘಟನೆಗಳು ಆಯಾ ಸ್ಥಳಗಳಲ್ಲಿ ಅಕ್ಷರಸಃ ನೆರವೇರುತ್ತವೆ ಎಂಬುದಾಗಿ ನಂಬುವವರಿಗೆ ನೀವು ಏನು ಹೇಳುತ್ತಿರಿ? ಈ ವಚನಗಳನ್ನು ಈ ರೀತಿಯಲ್ಲಿ ತರ್ಜುಮೆ ಮಾಡಬಾರದು ಎಂದು ಅವರಿಗೆ ಹೇಗೆ ಹೇಳುತ್ತಿರಿ?

2. ನಾವು ನೋಡಿದ ಹಾಗೆ ಬಾಬೇಲಿನ ಪ್ರಭಾವವು ಲೋಕದ ಎಲ್ಲಾ ಕಡೆಗೆ ಹೇಗೆ ವಿಸ್ತರಿಸಿದೆ? ಬಾಬೇಲಿನ ಕೆಲವು ಭೋಧನೆಗಳು ಯಾವುವು, ಮತ್ತು ಈ ಬೋಧನೆಗಳ ವ್ಯತ್ಯಾಸವನ್ನು ನೀವು ಹೇಗೆ ಗಮನಿಸುತ್ತೀರಿ ಮತ್ತು ಅವುಗಳಿಂದ ನಾವು ಹೇಗೆ ದೂರವಿರಬಹುದು?

3. ಸೋಮವಾರದ ಪಾಠದಲ್ಲಿ ಎಲೆನ್ ಜಿ ವೈಟ್ ರ ಉಲ್ಲೇಖಗಳು ಲೋಕದಲ್ಲಿ ಸಭೆಯ ಮತ್ತು ಲೋಕದ ಐಕ್ಯತೆಯು ತನ್ನ ಅಂತಿಮ ಹಂತವನ್ನು ತಲುಪುತ್ತದೆ ಈ ಹಂತವನ್ನು ತಲುಪುವ ಮುನ್ನ ಬಾಬೇಲಿನ ಬೀಳುವಿಕೆಯು ಸಂಪೂರ್ಣವಾಗುವುದಿಲ್ಲ ಎಂಬ ಮಾತನ್ನು ಗಮನಿಸಿರಿ ಸಭೆಯ ಮತ್ತು ಲೋಕದ ಐಕ್ಯತೆಯು ಈ ವಾಕ್ಯದ ಕುರಿತಾಗಿ ಆಲೋಚಿಸಿರಿ?